ದಿನಾಂಕಃ 19-07-2017 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಕೆ ಸಿ ಬಿ ವಕೀಲರಿಂದಃ

ಹುಣಸೂರು ತಾಲ್ಲೋಕು, ಗಾವಡಗೆರೆ ಹೋಬಳಿ, ಗಾವಡಗೆರೆ ಗ್ರಾಮದಲ್ಲಿ ಸರ್ವೆ ನಂಃ 158 ಮತ್ತು ಸರ್ವೆ ನಂಃ 159 ಎಂಬ ಜಮೀನು ಇದೆ ಎಂದರೆ ಸಾಕ್ಷಿಯು ಸರ್ವೆ ನಂಃ 159/1 ಮಾತ್ರ ಇದೆ ಎಂದಿದ್ದಾರೆ. ಸರ್ವೆ ನಂಃ 159 ಒಟ್ಟು ಎಷ್ಟು ಫೋಡುಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಃ 159 ರ ಯಾವ್ಯಾವ ಫೋಡಿನಲ್ಲಿ ಯಾರ್‍ಯಾರು ಸ್ವಾಧೀನದಲ್ಲಿದ್ದು, ಅದರ ಚಕ್ಕುಬಂಧಿಯನ್ನು ನಾನು ಹೇಳಬಲ್ಲೆ. ಸರ್ವೆ ನಂಃ 159/2 ರಲ್ಲಿ ಯಾರು ಸ್ವಾಧೀನದಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. ಅದರ ಚಕ್ಕುಬಂಧಿ ನನಗೆ ಗೊತ್ತು. ಸರ್ವೆ ನಂಃ 159/2 ರ ಪೂರ್ವಕ್ಕೆ ಪೀರೇದಾಸನಾಯಕರವರ ಜಮೀನು ಇದೆ, ಪಶ್ಚಿಮಕ್ಕೆ ಕಾಡನಾಯಕ ಇವರ ಜಮೀನು, ಉತ್ತರಕ್ಕೆ ತಿಮ್ಮನಾಯಕನ ಜಮೀನು ಮತ್ತು ದಕ್ಷಿಣಕ್ಕೆ ಸಿದ್ದನಾಯಕ ಇವರ ಜಮೀನು ಇದೆ.

ಅದೇ ರೀತಿ ಸರ್ವೆ ನಂಃ159/3 ರಲ್ಲಿ ಯಾರ ಸ್ವಾಧೀನ ಇದ್ದಾರೆಂದು ನನಗೆ ಗೊತ್ತಿಲ್ಲ. ಅದರ ಚಕ್ಕುಬಂಧಿ ನನಗೆ ಗೊತ್ತು. ಸರ್ವೆ ನಂಃ 159/3 ರ ಪೂರ್ವಕ್ಕೆ ಪೀರೆದಾಸನಾಯಕ ಇವರ ಜಮೀನು, ಪಶ್ಚಿಮಕ್ಕೆ ಕಾಡನಾಯಕರ ಜಮೀನು, ಉತ್ತರಕ್ಕೆ ತಿಮ್ಮನಾಯಕ ಇವರ ಜಮೀನು ಮತ್ತು ದಕ್ಷಿಣಕ್ಕೆ ಸಿದ್ಧನಾಯಕನ ಜಮೀನು ಇದೆ. ಸರ್ವೆ ನಂಃ 159 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ಹಾಜರುಮಾಡಿರುವ ನಿಪಿ-1 ಸರ್ವೆ ನಂಃ 159/1ಕ್ಕೆ ಸಂಬಂಧಪಟ್ಟಿದ್ದಾಗಿದೆ. ನಿಪಿ-1 ಸರ್ವೆ ನಂಃ 158ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ಸರ್ವೆ ನಂಃ158ಕ್ಕೆ ಬೇರೆ ಚಕ್ಕುಬಂಧಿ ಇದೆ ಮತ್ತು ಸರ್ವೆ ನಂಃ 159ಕ್ಕೆ ಬೇರೆ ಚಕ್ಕುಬಂಧಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-1ನ್ನು ತೋರಿಸಿ, ಅದರಲ್ಲಿರುವ ಸರ್ವೆ ನಂಃ 158ನ್ನು ಪೆನ್ಸಿಲ್‌ನಿಂದ ರೌಂಡ್ ಮಾಡಿ, ಸರ್ವೆ ನಂಃ 159 ಎಂದು ಬರೆದಿದ್ದಾರೆ ಎಂದರೆ ಸರಿ. ಅದೇ ರೀತಿ ಇನ್ನೊಂದು ಕಡೆಯೂ ಸಹಾ ಸರ್ವೆ



ನಂಃ 158ನ್ನು ಪೆನ್ಸಿಲ್‌ನಿಂದ ರೌಂಡ್ ಮಾಡಿ, ಸರ್ವೆ ನಂಃ 159 ಎಂದು ಬರೆದಿದ್ದಾರೆ ಎಂದರೆ ಸರಿ. ಸದರಿ ನಿಪಿ-1ರ ಮೇಲೆ ಪೆನ್ಸಿಲ್‌ನಿಂದ ರೌಂಡ್ ಮಾಡಿರುವ ಬಗ್ಗೆ ತಿದ್ದುಪಡಿ ಮಾಡಿರುವ ಬಗ್ಗೆ ಸಹಿಯನ್ನು

ಹಾಕಿರುವುದಿಲ್ಲ ಎಂದರೆ ನನಗೆ ಗೊತ್ತಾಗುತ್ತಿಲ್ಲ ಎಂದಿದ್ದಾರೆ. ಸಾಕ್ಷಿ ಮುಂದುವರೆದು ನಾನು ಹಾಜರುಪಡಿಸಿದಾಗ ಅದರಲ್ಲಿ ಪೆನ್ಸಿಲ್‌ನಿಂದ ರೌಂಡ್ ಮಾಡಿ ಬರೆದಿರುವುದಿಲ್ಲ, ಆದರೆ ಈಗ ಹಾಗೆ ಮಾಡಿದ್ದಾರೆ ಎಂದಿದ್ದಾರೆ. ಸದರಿ ನಿಪಿ-1ನ್ನು ತಿದ್ದುಪಡಿ ಯಾವಾಗ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನಾನು ನ್ಯಾಕ್ಕೆ ಹಾಜರುಮಾಡಿದಾಗ ಹಾಗೆ ಇರಲಿಲ್ಲ ಎಂದಿದ್ದಾರೆ.

ನಿಪಿ-1ರಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ನಿಪಿ-1ರ ಕೆಳಭಾಗದಲ್ಲಿ ಯಾವುದೇ ಷರಾ ಇರುವುದಿಲ್ಲ ಮತ್ತು ಯಾರು ಬರೆದು ತಿದ್ದುಪಡಿ ಮಾಡಿದ್ದಾರೆಂದು ಉಲ್ಲೇಖ ಇಲ್ಲ ಎಂದರೆ ಸರಿ. ಸರ್ವೆ ನಂಃ 159/4 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಸರ್ವೆ ನಂಃ 159/4 ಕ್ಕೆ ಸ್ಕೆಚ್ಚಾಗಲೀ ಅಥವಾ ಚಕ್ಕುಬಂಧಿಯಾಗಲೀ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಸರ್ವೆ ನಂಃ 159/4 ರ ಚಕ್ಕುಬಂಧಿ ನನಗೆ ಗೊತ್ತಿಲ್ಲ, ನಿಪಿ-2 ಸರ್ವೆ ನಂಃ 159/1ಕ್ಕೆ ಸಂಬಂಧಿಸಿದಂತೆ ಕೊಟ್ಟಿದ್ದೇನೆ.

ಸರ್ವೆ ನಂಃ 158 ಕ್ಕೆ ಬೇರೆ ಚಕ್ಕುಬಂಧಿ ಇದ್ದು, ಸರ್ವೆ ನಂಃ 159ಕ್ಕೆ ಬೇರೆ ಚಕ್ಕುಬಂಧಿ ಇದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂಃ 159/1 ರಿಂದ ಸರ್ವೆ ನಂಃ159/4 ಕ್ಕೆ ಬೇರೆ ಬೇರೆ ಚಕ್ಕುಬಂಧಿಗಳು ಇವೆ ಎಂದರೆ ಸರಿ. ನಿಪಿ-6 ಮತ್ತು 7ನ್ನು ಯಾವ ಆಧಾರದ ಮೇಲೆ ಬರೆಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದಿದ್ದಾರೆ. ಸಾಕ್ಷಿ ಮುಂದುವರೆದು ನಮ್ಮ ಜಮೀನು ಇದ್ದಿದ್ದರಿಂದ ಬರೆಸಿದ್ದೇನೆ ಎಂದಿದ್ದಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶಕೋರಿದ್ದರಿಂದ ಮುಂದೂಡಲಾಯಿತು).

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.